ಮಾಡುತ್ತೇವೆಂದು ಅದನ್ನು ಮುಂದಕ್ಕೆ ಹಾಕುವುದು ಬೇಡ ನಿಮಗೆ ಅಧಿಕಾರ ಇರುವುದು ಅಕ್ಟೋಬರ್ 3ರವರೆಗೆ ತಾವು ಅಕ್ಟೋಬರ್ 2ರ ಒಳಗೆ ಇದರ ಬಗ್ಗೆ ನಿರ್ಣಯ ಮಾಡುತ್ತೇವೆಂದು ಭರವಸೆಯನ್ನು ಸದನಕ್ಕೆ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಸಿ ಚನ್ನಿಗಪ್ಪ ಅರಣ್ಯ ಪ್ರದೇಶದ ಒಟ್ಟಾರೆ control ಯಾರ ಹತ್ತಿರ ಇದೆ ಎಂಬುದು ಹಿರಿಯ ಸದಸ್ಯರಾದ ತಮಗೆ ಗೊತ್ತಿದೆ ಸುಪ್ರಿಂ ಕೋರ್ಟ್ ಒಂದು ಆದೇಶ ಮಾಡಿದೆ ಅದರ ಪ್ರಕಾರ ಯಾವುದೇ ತೀರ್ಮಾನ ಮಾಡುವಾಗ ಸುಪ್ರಿಂ ಕೋರ್ಟ್‌ನ ತೀರ್ಪು ಏನಿದೆ ಅದರ ಆಧಾರದ ಮೇಲೆಯೇ ಮಾಡಬೇಕೆಂದು ಕಟ್ಟುನಿಟ್ಟಾಗಿ ಆದೇಶ ಮಾಡಿದ್ದಾರೆ ಆ ಪ್ರಕಾರ ನಮ್ಮ ರಾಜ್ಯದ ಒಟ್ಟಾರೆ ವಿಸ್ತೀರ್ಣದ 22 64% ಅರಣ್ಯವೇನಿದೆ ಅದರಲ್ಲಿ ಯಾವುದೇ ಪ್ರದೇಶದಲ್ಲಿ ಒಂದು ಎಕರೆ ಬಿಡಬೇಕಾದರೆ ಅಥವಾ ಸೇರಿಸಬೇಕಾದರೆ ನಾವು ಸುಪ್ರಿಂ ಕೋರ್ಟ್‌ನ ಆದೇಶವನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕಾಗಿದೆ ತಮಗೆ ಗೊತ್ತಿದೆ ಈ ಹಿಂದೆ ಏನು ಬೇಕಾದರೂ ಮಾಡಬಹುದಿತ್ತು ಆದರೆ 1980ರ ನಂತರ ಆ ಕಾನೂನಿನ ಪ್ರಕಾರ ಸುಪ್ರಿಂ ಕೋರ್ಟ್ ಸಂಪೂರ್ಣವಾದ ಜವಾಬ್ದಾರಿಯನ್ನು ಇಟ್ಟುಕೊಂಡು ಒಂದು ಕಮಿಟಿ ಮಾಡಿಕೊಂಡು ಅದರ ಉಸ್ತುವಾರಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಾರೆ ನಮ್ಮ ಅಧಿಕಾರಿಗಳೂ ಈಗ ಕೈಕಟ್ಟಿಕೊಂಡಿದ್ದಾರೆ ಅಧಿಕಾರಿಗಳು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ತಾವು ಹೇಳಿದಂತೆ ಅರಣ್ಯವನ್ನೂ ಒಟ್ಟಾರೆ ಸಹಭಾಗಿತ್ವದಲ್ಲಿ ಮಾಡಬೇಕೆಂಬುದು ಸತ್ಯ ಅದನ್ನು ಮಾಡಬೇಕು ಅರಣ್ಯ ಪ್ರದೇಶ ಜನರಿಗೆ ಸೇರಿರತಕ್ಕದ್ದು, ಅದು ಜನರ ಮತ್ತು ರಾಜ್ಯದ ಆಸ್ತಿ ಆದರೆ ಸುಪ್ರಿಂ ಕೋರ್ಟ್ ಇಲ್ಲಿ ಮಧ್ಯದಲ್ಲಿ ಬಾಯಿ ಹಾಕಿರುವ ಕಾರಣ ಸುಪ್ರಿಂ ಕೋರ್ಟ್‌ನ ಆದೇಶವನ್ನು ಇಲ್ಲಿ ಉಲ್ಲಂಘನೆ ಮಾಡಲು ಬರುವುದಿಲ್ಲ ಆದರೂ ತಾವು ಸಲಹೆ ಕೊಟ್ಟಿದ್ದೀರಿ ಇದರ ಬಗ್ಗೆ ನಾವು ತಮ್ಮನ್ನು ಕರೆದು ವೈಜ್ಞಾನಿಕವಾಗಿ ಚಿಂತನೆ ನಡೆಸಿ ಸುಪ್ರಿಂ ಕೋರ್ಟ್‌ನ ಆದೇಶದ ಮೇರೆಗೆ ಏನು ಮಾಡಬಹುದು ಎಂಬ ಬಗ್ಗೆ ಪ್ರಯತ್ನ ಮಾಡುತ್ತೇವೆ

ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ವಿಶೇಷ ಪ್ಯಾಕೇಜ್

154 (1366) ಶ್ರೀ ಶ್ರೀರಾಮರೆಡ್ಡಿ ಜಿ ಏ (ಬಾಗೇಪಲ್ಲಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಅನುಕೂಲಕ್ಕಾಗಿ ವಿಶೇಷ ಪ್ಯಾಕೇಜ್ ಪ್ರಕಟಿಸಿದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ?

ಅಪ್ಪಾ ಸಾಹೇಬ(ಅಪ್ಪು) ಮಲ್ಲಪ್ಪ ಪಟ್ಟನ ಶೆಟ್ಟಿ (ಜವಳಿ ಸಚಿವರು)

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಅನುಕೂಲಕ್ಕಾಗಿ ರಾಜ್ಯ ಸರ್ಕಾರವು "ನೇಕಾರರ ವಿಶೇಷ ಪ್ಯಾಕೇಜ್" ನ್ನು 2003–04 ನೇ ಸಾಲಿನಲ್ಲಿ ಪ್ರಕಟಿಸಿದ್ದು, 2004–05 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ

ಆ) ರಾಜ್ಯದ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸಿದ ನಂತರ ಅವುಗಳಿಗೆ ಪರಿಹಾರ ನೀಡುವ ದಿಸೆಯಲ್ಲಿ ಹಾಗೂ ರಾಷ್ಟ್ರದ ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ರಾಜ್ಯದ ಜವಳಿ ಕ್ಷೇತ್ರವನ್ನು ಮುಕ್ತ ಮಾರುಕಟ್ಟೆಗೆ ಸಜ್ಜುಗೊಳಿಸುವ ದೃಷ್ಟಿಯಿಂದ ನೇಕಾರರಿಗೆ ವಿವಿಧ ಸವಲತ್ತುಗಳನ್ನು ಹೊಂದಿದ "ನೇಕಾರರ ವಿಶೇಷ ಪ್ಯಾಕೇಜ್" ನ್ನು ರಾಜ್ಯ ಸರ್ಕಾರವು 2003–04 ರಲ್ಲಿ ಪ್ರಕಟಿಸಿತು ಮತ್ತು 2004–05 ನೇ ಸಾಲಿನಿಂದ ಪ್ಯಾಕೇಜ್ನಡಿ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಯಿತು

ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಪ್ರಗತಿ ಕೆಳಕಂಡಂತಿದೆ

ಅ) 2004–05 ನೇ ಸಾಲಿನಲ್ಲಿ ರೂ 26 00 ಕೋಟಿಗಳನ್ನು ಬಿಡುಗಡೆಗೊಳಿಸಿ 9 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ

ಆ) 2005-06 ನೇ ಸಾಲಿನಲ್ಲಿ ರೂ 17 60 ಕೋಟಿಗಳನ್ನು ಬಿಡುಗಡೆಗೊಳಿಸಿ 7 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ

ಇ) 2006–07 ನೇ ಸಾಲಿನಲ್ಲಿ ರೂ 49 99 ಕೋಟಿಗಳನ್ನು ಬಿಡುಗಡೆಗೊಳಿಸಿ 12 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ

ಈ) 2007–08 ನೇ ಸಾಲಿನಲ್ಲಿ ಒಟ್ಟು ರೂ 60 68 ಕೋಟಿಗಳ ಆಯವ್ಯವನ್ನು ಒದಗಿಸಿದ್ದು, ವಿವರ ಕೆಳಕಂಡಂತಿದೆ

1) ನೇಕಾರರ ವಿಶೇಷ ಪ್ಯಾಕೇಜ್

ಅ) ಸಾಮಾನ್ಯ – ರೂ 3247 62 ಲಕ್ಷ
ಆ) ವಿ ಘ ಯೋ – ರೂ 897 64 ಲಕ್ಷ
ಇ) ಗಿ ಉ ಯೋ – ರೂ 362 93 ಲಕ್ಷ
ಒಟ್ಟು ರೂ 4508 50 ಲಕ್ಷ

2) ನೇಕಾರರ ವಿಶೇಷ ಪ್ಯಾಕೇಜ್ – ಕೆಹೆಚ್ಡಿಸಿ

ಅ) ಸಾಮಾನ್ಯ –ರೂ 1347 51 ಲಕ್ಷ
ಆ) ವಿ ಘ ಯೋ – ರೂ 151 31 ಲಕ್ಷ
ಇ) ಗಿ ಉ ಯೋ – ರೂ 61 18 ಲಕ್ಷ
ಒಟ್ಟು –ರೂ 1560 00 ಲಕ್ಷ

ಶ್ರೀ ಜಿ ವಿ ಶ್ರೀರಾಮರೆಡ್ಡಿ . ಮಾನ್ಯ ಉಪಾಧ್ಯಕ್ಷರೆ, 2003–04ರಲ್ಲಿ ವಿಶೇಷ ಪ್ಯಾಕೇಜನ್ನು ಪ್ರಕಟ ಮಾಡಿದ್ದೇವೆ ಎಂದು ಹೇಳಿದ್ದಾರೆ 2004–05 ನೇ ಸಾಲಿಗೆ ವಿವಿಧ ಯೋಜನೆಯ ಅಡಿಯಲ್ಲಿ ಜಾರಿಗೆ ತರಲಾಯಿತು ಎಂದು ಹೇಳಿದ್ದಾರೆ

ವಿವಿಧ ಯೋಜನೆ ಎಂದರೆ ಯಾವ್ಯಾವ ಯೋಜನೆಯಲ್ಲಿ ವಿಶೇಷ ಪ್ಯಾಕೇಜನ್ನು ಜಾರಿಗೆ ತಂದಿದ್ದೀರಿ ? ಅವರ ಉತ್ತರದಲ್ಲಿ "ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ರಾಜ್ಯದ ಜವಳಿ ಕ್ಷೇತ್ರವನ್ನು ರಕ್ಷಿಸಲು ವಿವಿಧ ಯೋಜನೆಗಳು" ಎಂದು ಹೇಳಿದ್ದಾರೆ ಆ ವಿವಿಧ ಯೋಜನೆಗಳು ಯಾವುದು ? ಯಾವ್ಯಾವ ಯೋಜನೆಯಲ್ಲಿ ಅವರಿಗೆ ರಕ್ಷಣೆಯನ್ನು ಒದಗಿಸಿದ್ದೀರಿ? 2004–05 ನೇ ಸಾಲಿನಲ್ಲಿ 26ಕೋಟಿ ಬಿಡುಗಡೆ ಮಾಡಿ 9 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಹೇಳಿದ್ದೀರಿ? ಅಂದರೆ ಒಟ್ಟು ಎಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ? ಯಾವ್ಯಾವ ಯೋಜನೆಗಳನ್ನು ಮಾಡಿದ್ದೀರಿ ಎಂಬ ಬಗ್ಗೆ ಉತ್ತರ ಕೊಡಬೇಕು

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣ ಶೆಟ್ಟಿ (ಜವಳಿ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀರಾಮರೆಡ್ಡಿಯವರು ನೇಕಾರರ ವಿಶೇಷ ಪ್ಯಾಕೇಜ್‌ನಲ್ಲಿ ಏನು ಮಾಡಿದ್ದೀರಿ ಎಂಬ ಪ್ರಶ್ನೆ ಕೇಳಿದ್ದಾರೆ ಅದರ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ 2003–04ನೇ ಸಾಲಿಗೆ ನೇಕಾರರಿಗೆ ಏನು ಪ್ಯಾಕೇಜ್ ಮಾಡಿದ್ದೀರಿ ಅದರಲ್ಲಿ ಯಾವ್ಯಾವ ಯೋಜನೆಗಳಿದೆ ಎಂದು ಪ್ರಶ್ನೆ ಕೇಳಿದ್ದಾರೆ ಕೈಮಗ್ಗ ಮತ್ತು ವಿದ್ಯುತ್ ಮಗ್ಗದ ನೇಕಾರರಿಗೆ ಮನೆಗಳು ಮತ್ತು ವಿದ್ಯುತ್‌ನಲ್ಲಿ 10% ಸಬ್ಸಿಡಿಯನ್ನು ಈಗ ಏನು 10 ಹೆಚ್ ಪಿ ಯವರೆಗೆ ಇತ್ತು ಅದನ್ನು 20 ಹೆಚ್ ಪಿ ಯವರೆಗೆ 2005–06ನೇ ಸಾಲಿನಲ್ಲಿ ತರಲಾಗಿದೆ ಮುಂದು ನೇಕಾರರಿಗೆ ಬೇರೆ ಬೇರೆ ರೀತಿಯಲ್ಲಿ, ಅಂದರೆ ಇವತ್ತು ವಿಶೇಷ ಪ್ಯಾಕೇಜ್ ಅಡಿಯಲ್ಲಿ 10 ಹೆಚ್ ಪಿ ಯವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗಗಳಿಗೆ ವಿದ್ಯುತ್ ರಿಯಾಯಿತಿಯನ್ನು ಕೊಡುವ ಕೆಲಸವನ್ನು 2004–05ನೇ ಸಾಲಿನಲ್ಲಿ ಮಾಡಲಾಯಿತು ಅದರಲ್ಲಿ ಯಶಸ್ವಿನಿ ಯೋಜನೆಯ ಅಡಿಯಲ್ಲಿ, ವಿಮಾ ಯೋಜನೆ ಹಾಗೂ ಕೈಮಗ್ಗ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ, ಗದಗ್ ಮತ್ತು ಜಮಖಂಡಿ ಘಟಕಗಳಿಗೆ ವಿಶೇಷವಾಗಿ 30 ಲಕ್ಷ ರೂಪಾಯಿ ಆರ್ಥಿಕ ಆವರ್ತ ನಿಧಿಯನ್ನು ಕೊಡುವಂಥದ್ದು, ವಿದ್ಯುತ್ ಮಗ್ಗಗಳಿಗೆ ಆಧುನೀಕರಣದಲ್ಲಿ 15 ಲಕ್ಷ ರೂಪಾಯಿಗಳನ್ನು 75 ಘಟಕಗಳಿಗೆ ಕೊಡಲಾಗಿದೆ ಸಿದ್ದ ಉಡುಪು ತಯಾರಿಕಾ ಘಟಕದಲ್ಲಿ ವಿದ್ಯುತ್ ಮಗ್ಗ ತರಬೇತಿಗೆ 8 62 ರೂಪಾಯಿಗಳನ್ನು 300 ಜನರಿಗೆ ತರಬೇತಿ ನೀಡುವ ಸಲುವಾಗಿ ಕೊಡಲಾಗಿದೆ ಕೈಮಗ್ಗ ಅಭೀವೃದ್ಧಿ ನಿಗಮದ ಪುನಶ್ಚೇತನಕ್ಕಾಗಿ 5 ಕೋಟಿ ರೂಪಾಯಿಗಳನ್ನು ರಾಜ್ಯದ ಪಾಲಾಗಿ ಕೊಡಲಾಗಿದೆ ಅದೇ ರೀತಿ ಕೆ ಹೆಚ್ ಡಿ ಸಿ ಗೆ ದುಡಿಮೆಯ ಬಂಡವಾಳ ಸಹಾಯವಾಗಿ 1 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ ಬೆಂಗಳೂರು ಮತ್ತು ಆನೇಕಲ್ ತಾಲ್ಲೂಕಿನ ಪವರ್ ಲೂಮ್ ವರ್ಕ್ಸ್ ಸ್ಥಾಪನೆಗಾಗಿ 3 ಕೋಟಿ ರೂಪಾಯಿಗಳನ್ನು ಮತ್ತು ರಾಜ್ಯ ಮತ್ತು ಜಿಲ್ಲಾ ವಲಯ ನೇಕಾರರು ಸರ್ಕಾರದಿಂದ ಪಡೆದ ಸಾಲದ ಮೇಲಿನ ಬಡ್ಡಿ ಹಾಗೂ

ಸುಸ್ತಿ ಬಡ್ಡಿ ಮನ್ನಾ ಮಾಡಲು 84 ನೇಕಾರ ಸಂಘಗಳನ್ನು ಅದರಲ್ಲಿ ಅಳವಡಿಸಲಾಗಿದೆ

ಶ್ರೀ ಡಿ ಆರ್ ಪಾಟೀಲ್ ಕೆ ಹೆಚ್ ಡಿ ಸಿ ವ್ಯಾಪ್ತಿಯಲ್ಲಿ ಬರತಕ್ಕ ನೇಕಾರರಿಗೆ ನಿತ್ಯ ಉದ್ಯೋಗ ಕೊಡುವುದು ಕೆಲವೊಂದು ಪ್ರಸಂಗಗಳಲ್ಲಿ ಆಗುತ್ತಿರುವುದಿಲ್ಲ NREGPನಲ್ಲಿ ಈಗ ಹೇಗೆ ಉದ್ಯೋಗ ಕೊಡದಿದ್ದರೆ ಕನಿಷ್ಟ 20 ರೂಪಾಯಿಗಳನ್ನು ಅವರಿಗೆ ಕೊಡಬೇಕೆಂದು ನಿರ್ಣಯ ಇದೆ, ಅದೇ ರೀತಿ ಕೆ ಹೆಚ್ ಡಿ ಸಿ ನೇಕಾರರಿಗೆ ಯಾವುದಾದರೂ ಉದ್ಯೋಗ ಕೊಡಲು ಆಗದಿದ್ದರೆ ಅವರ ಕುಟುಂಬವನ್ನು ನಡೆಸಲು ಕನಿಷ್ಟ 20–25 ರೂಪಾಯಿಗಳನ್ನು ಕೊಡುವ ಯೋಜನೆಯನ್ನು ತಾವು ಜಾರಿಗೆ ತರುತ್ತೀರ ?

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟನ ಶೇಟ್ಟಿ ಮಾನ್ಯ ಡಿ ಆರ್ ಪಾಟೀಲರು ಹೇಳಿದಂತೆ, ಅವರೂ ಆ ವಲಯದಿಂದ ಬಂದಂಧವರು ಅದರ ಬಗ್ಗೆ ನಾನು ಪರಿಶೀಲಿಸುತ್ತೇನೆ ಏಕೆಂದರೆ ಅದರಲ್ಲಿ ಎಷ್ಟು ನೇಕಾರರು ಇದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ ತಮಗೆ ಗೊತ್ತಿದೆ 1996 ರಿಂದ ನೇಕಾರರ ಸರ್ವೆಯ ಕೆಲಸ ಆಗಿಲ್ಲ ಈಗ ಸರ್ವೆ ಕೆಲಸ ಪ್ರಾರಂಭ ಮಾಡಲು ಹೇಳಿದ್ದೇವೆ ಅದರಲ್ಲಿ ಎಷ್ಟು ನೇಕಾರರು ಬರುತ್ತಾರೆ ನೋಡಿಕೊಂಡು, ಈಗಾಗಲೇ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರನ್ನು, ಉಪಮುಖ್ಯಮಂತ್ರಿಯವರನ್ನು ವಿನಂತಿ ಮಾಡಿಕೊಂಡಿದ್ದೇನೆ ಇದಕ್ಕೆ ಸಂಬಂಧಪಟ್ಟ ಎಲ್ಲಾ ಶಾಸಕರ ಸಭೆಯನ್ನು ಕರೆದು ನೇಕಾರರ ಸಮಸ್ಯೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟು ಸಹಾಯ ಮಾಡುವ ಬಗ್ಗೆ ಕೇಳಿಕೊಂಡಾಗ ಅವರು ಒಪ್ಪಿಗೆ ಕೊಟ್ಟಿದ್ದರು

ಉಪಾಧ್ಯಕ್ಷರು ಮಾನ್ಯ ಡಿ ಆರ್ ಪಾಟೀಲರೆ, ತಾವು ಸಚಿವರ ಚೇಂಬರ್‌ಗೆ ಹೋಗಿ ಇದರ ಬಗ್ಗೆ ಚರ್ಚೆ ಮಾಡಿದರೆ ಸಮಸ್ಯೆ ಬಗೆಹರಿಯುತ್ತದೆ ಆವಳಿ ಇಲಾಖೆಗೆ ಸಂಬಮಧಪಟ್ಟಿದ್ದು ನನಗೂ ಅರ್ಧವಾಗುತ್ತದೆ ಸಮಸ್ಯೆಗಳ ಬಗ್ಗೆ ಸಮಂಜಸವಾದ ಉತ್ತರವನ್ನು ಇದ್ದಕ್ಕಿದಂತೆ ಕೇಳಿದ್ದೀರಿ

ಶ್ರೀ ಡಿ ಆರ್ ಪಾಟೀಲ್ ಅದನ್ನು ಒಪ್ಪುತ್ತೇನೆ

ಮಾನ್ಯ ಉಪಾಧ್ಯಕ್ಷರೆ, ನಾನು ಸಚಿವರಿಗೆ ಒಂದನ್ನು ಒತ್ತಾಯಿಸುತ್ತೇವೆ ಸಂಬಂಧಿಸಿದ ಶಾಸಕರ ಸಭೆಯನ್ನೇನು ತಾವು ಕರೆಯಬೇಕೆಂದಿದ್ದೀರೋ, ಅದನ್ನು ಆಗಸ್ಟ್ 10ರೊಳಗೆ ಕರೆಯುವ ವ್ಯವಸ್ಥೆ ಮಾಡಿ

ಶ್ರೀ ಅಪ್ಪು ಪಟ್ಟನ ಶೆಟ್ಟಿ ಈ ಅಧಿವೇಶನ ಮುಗಿಯುವುದರೊಳಗೆ ಕರೆಯುತ್ತೇನೆಂದು ಈಗಾಗಲೇ ನಾನು ಹೇಳೀದೇನೆ ಆದಷ್ಟು ಬೇಗನೇ ಈ ಸಭೆಯನ್ನು ನಾನು ಕರೆಯುತ್ತೇನೆ